

## ಅಮ್ಮನಿಗೆ ಬೇಕು ಬೆಂಬಲ

‘ಹೊಸ ಕಾಲದ ಅಮ್ಮಂದಿರ ನವನವೀನ ಸಮಸ್ಯೆಗಳು!’ (ಮೇ 18, ಕೋಡಿಬೆಟ್ಟು ರಾಜಲಕ್ಷ್ಮಿ) ಲೇಖನ, ಮಕ್ಕಳನ್ನು ಬೆಳೆಸುವಲ್ಲಿ ಈಗಿನ ಅಮ್ಮಂದಿರಿಗಿರುವ ಬಹುಮುಖ್ಯ ಸಮಸ್ಯೆ, ಸವಾಲುಗಳನ್ನು ಸ್ಪಷ್ಟವಾಗಿ ಗುರುತಿಸಿದೆ. ಹಾಗೆಯೇ, ಮಕ್ಕಳನ್ನು ಸಂಭಾಳಿಸುವಲ್ಲಿ ಅವರ ವಿಶೇಷ ಹೊಣೆಗಾರಿಕೆಯ ಕುರಿತೂ ಪ್ರಸ್ತಾಪ ಮಾಡಿರುವುದು ಸಮಂಜಸ. ಆದರೆ ಮಕ್ಕಳ ವಿಷಯದಲ್ಲಿ ಮಹಿಳೆಯರಿಗೆ ಕುಟುಂಬದವರೂ ಸಮಾನವಾಗಿ ಸಹಾಯಕ್ಕೆ ನಿಲ್ಲಬೇಕಿದೆ.

—ಗೌರಿ ಸತೀಶ್, ಮೈಸೂರು

## ದೊಡ್ಡ ಸವಾಲೇ ಸರಿ!

ಹೊಸ ಕಾಲದ ಅಮ್ಮಂದಿರ ಸವಾಲುಗಳ ಕುರಿತ ಮುಖಪುಟ ಲೇಖನ ಸಮಯೋಚಿತವಾಗಿದೆ. ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನದ ನೂರಾರು ಆಯ್ಕೆಗಳ ನಡುವೆ ಬೆಳೆಯುತ್ತಿರುವ ಮಕ್ಕಳ ಪಾಲನೆ – ಪೋಷಣೆ ಸವಾಲು ಅಮ್ಮಂದಿರ ಮೇಲಿದೆ. ಮಕ್ಕಳ ಬೆಳವಣಿಗೆಯಲ್ಲಿ ಅಮ್ಮಂದಿರ ಪಾತ್ರದ ಕುರಿತು ಲೇಖಕಿ ಪಲ್ಲವಿ ಇಡೂರು ಅವರ ಅಭಿಪ್ರಾಯ ಗಮನಾರ್ಹ. ಆಸ್ತಿಗಿಂತ ಉತ್ತಮ ಆರೋಗ್ಯವೇ ಸಂಪತ್ತು ಎನ್ನುವ ಅನುಸೂಯ ಭಾರದ್ವಾಜ್ ಅವರ ಮಾತನ್ನೂ ಮರೆಯುವಂತಿಲ್ಲ.

—ಮೃದುಲಾ, ಮಡಿಕೇರಿ

## ಒತ್ತಡದಲ್ಲಿ ತಾಯಿ-ಮಗು...

ಅಮ್ಮಂದಿರ ಕುರಿತ ಲೇಖನದಲ್ಲಿ, ತಾಯಂದಿರು ಮಕ್ಕಳನ್ನು ಬೆಳೆಸಲು ಪಡುವ ಕಷ್ಟವನ್ನು ಯಥಾವತ್ತಾಗಿ ಬಿಂಬಿಸಲಾಗಿದೆ. ನಾಲ್ಕಾರು ದಶಕಗಳ ಹಿಂದೆ ಅವಿಭಕ್ತ ಕುಟುಂಬದಲ್ಲಿ, ಮಕ್ಕಳು ಆಟವಾಡುತ್ತ, ಉಣ್ಣುತ್ತ ತಿನ್ನುತ್ತ ಅಜ್ಜ–ಅಜ್ಜಿಯರ ಮಡಿಲಲ್ಲಿ ಬೆಳೆದು ದೊಡ್ಡವರಾಗಿಬಿಡುತ್ತಿದ್ದರು. ಈಗ ಗಂಡ ಹೆಂಡತಿ, ಒಂದು ಮಗುವಿನ ಸಂಸಾರದಲ್ಲಿ ಮಗುವಿನ ಊಟ ಮಾಡಿಸುವುದರಿಂದ ಹಿಡಿದು ಅದರ ಶಿಕ್ಷಣ, ಉದ್ಯೋಗದ ಬಗ್ಗೆಯೇ ತಲೆಕೆಡಿಸಿಕೊಳ್ಳುವ ವಾತಾವರಣ ಇದೆ. ಒತ್ತಡಗಳಿಂದ ಅಮ್ಮಂದಿರು ಮಕ್ಕಳನ್ನು ಬೆಳೆಸುತ್ತಾರೆ, ಅದೇ ಒತ್ತಡ ಹಿಡಿದುಕೊಂಡೇ ಮಕ್ಕಳು ಬೆಳೆಯುತ್ತಿವೆ ಎನಿಸುತ್ತಿದೆ.

—ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

## ಜಾಣ್ಮೆ, ತಾಳ್ಮೆ ಎರಡೂ ಮುಖ್ಯ

ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಅಮ್ಮಂದಿರ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಲೇಖನ ಮನವರಿಕೆ ಮಾಡಿತು. ಮಕ್ಕಳ ಆಹಾರ, ಆರೋಗ್ಯ, ಅಭ್ಯಾಸ, ಶಿಕ್ಷಣ, ನಡವಳಿಕೆ, ಭಾವನೆ ಇವೆಲ್ಲದರ ಕುರಿತು ಕಾಲಕ್ಕೆ ತಕ್ಕಂತೆ ಬದಲಾಗುವ ಅನಿವಾರ್ಯತೆ ಈಗಿನ ತಾಯಂದಿರಿಗೆ ಸವಾಲೇ. ಆಗಿನ ಕಾಲದಲ್ಲಿಲ್ಲದ ಹಲವು ಸಮಸ್ಯೆಗಳು ಈ ಕಾಲದಲ್ಲಿ ಉದ್ಭವಿಸಿವೆ. ಹೀಗಾಗಿ ಅವನ್ನು ನಿಭಾಯಿಸುವ ಜಾಣ್ಮೆ, ತಾಳ್ಮೆ ಈಗಿನ ಅಮ್ಮಂದಿರಿಗೆ ಎಷ್ಟು ಅವಶ್ಯಕ ಎಂಬುದನ್ನೂ ಲೇಖನ ತೋರಿಸಿದೆ.

—ಜಾನಕಿ, ಬೆಂಗಳೂರು

## ಅಪರೂಪದ ‘ಬಿಯರ್ ಜಾತ್ರೆ’

‘ಬಿಯರ್ ಜಂಬೂಸವಾರಿ’ (ಮೇ 18, ಎಸ್. ನಟರಾಜ ಬೂದಾಳು) ಲೇಖನ ಅಪರೂಪದ್ದೆನಿಸಿತು. ಜರ್ಮನಿಯ ಬಿಯರ್ ಜಾತ್ರೆಗೆ ಲಕ್ಷಲಕ್ಷ ಜನ ಸೇರುವುದು, ಬಿಯರ್ ಸೇವಿಸುವುದು, ಬಿಯರ್ ಸಾರೋಟಿನ ಮೆರವಣಿಗೆ ಎಲ್ಲವೂ ಕಣ್ಣಿಗೆ ಕಟ್ಟಿದಂತೆ ವಿವರಿಸಲಾಗಿದೆ.

—ವರುಣ್ ಎಸ್., ಚಿಕ್ಕಬಳ್ಳಾಪುರ



## ಸಮಯೋಚಿತ ‘ನಿಮ್ಮೊಡನೆ’

‘ವಧುಗಳ ಬರಗಾಲ! ಬರುವುದೆ ಮಳೆಗಾಲ?’ (ಮೇ 18, ರಘುನಾಥ ಚ.ಹ.) ‘ನಿಮ್ಮೊಡನೆ’ ಬರಹ ಸಮಯೋಚಿತವಾಗಿದೆ. ಸುಮಾರು ಎರಡು ದಶಕಗಳ ಹಿಂದೆ, ತಮ್ಮ ಮಗಳಿಗೆ ವರ ಸಿಗುತ್ತಿಲ್ಲವೆಂದು ಆತಂಕಗೊಂಡ ರಾಜ್ಯಮಟ್ಟದ ನಿಷ್ಠಾವಂತ ಅಧಿಕಾರಿಯೊಬ್ಬರು, ದೇವರಿಗೆ ಉರುಳುಸೇವೆ ಸಲ್ಲಿಸಿದ್ದರು. ತಾವು ಯಾವುದೋ ಜನ್ಮದಲ್ಲೆಸಗಿದ ದೋಷದಿಂದ ಮಗಳಿಗೆ ತೊಂದರೆಯಾಗಿದೆ, ದೇಹ ದಂಡಿಸಿದರೆ ಕರ್ಮ ಕಳೆಯಬಹುದು ಎಂದು ಯಾರೋ ನೀಡಿದ ಸಲಹೆ ಇದಕ್ಕೆ ಕಾರಣವಾಗಿತ್ತು! ಪ್ರಸ್ತುತ ಸಂದರ್ಭ, ತಿರುವು ಮುರುವಾಗಿದೆ.

ಈಗಲಾದರೂ ರಾಜಕಾರಣಿಗಳು ಕೃಷಿಗೆ ಸಂಬಂಧಿಸಿದ ಸ್ವಾಮಿನಾಥನ್ ವರದಿ ಜಾರಿಗೊಳಿಸಿ, ಬೆಂಬಲ ಬೆಲೆ ಖಾತ್ರಿಗೊಳಿಸಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಪ್ರಾಧಾನ್ಯ ನೀಡಬೇಕಿದೆ. ಜನರು ಅಜ್ಞಾನಜನ್ಯವಾದ ಹೆಣ್ಣುಭ್ರೂಣ ಹತ್ಯೆ ನಿಲ್ಲಿಸಿದರೆ ಈ ಸಮಸ್ಯೆಗೆ ಪರಿಹಾರ ಸಾಧ್ಯವಾಗಬಹುದೇನೊ!

—ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

## ಅಚ್ಚರಿ ಮೂಡಿಸಿದ ಲೇಖನ

‘ನೋ ಫ್ಲೈಟ್ಸ್ ಲ್ಯಾಂಡ್’ (ಮೇ 18, ಅಬ್ದುಲ್ ರೆಹಮಾನ್ ಪಾಷ) ಲೇಖನ ಬಹಳ ಚೆನ್ನಾಗಿದೆ. ವಿಮಾನಗಳು ಹಾರಲು ಅಂಜುವ ಸ್ಥಳಗಳೂ ಇವೆಯಲ್ಲ ಎಂದು ಸೋಜಿಗವಾಯಿತು. ಜ್ವಾಲಾಮುಖಿ ಸ್ಫೋಟಿಸುವ ಪ್ರದೇಶದಲ್ಲಿ ವಿಮಾನಗಳು ಹಾರದಿರುವ ಬಗ್ಗೆ ಕೇಳಿದ್ದೆ. ಆದರೆ ಹಿಮಾಲಯದ ಮೇಲೆ, ಉಲ್ಕಾಗುಂಡಿಗಳ ಮೇಲೆ ಹಾರುವುದಿಲ್ಲ ಎಂದು ತಿಳಿದಿರಲಿಲ್ಲ. ಅಟ್ಲಾಂಟಿಕ್ ಸಾಗರದ ಬರ್ಮುಡ ತ್ರಿಕೋನದ ಮೇಲೂ ವಿಮಾನ ಹಾರುವುದಿಲ್ಲವೆಂದು ಓದಿದ ನೆನಪು.

—ಕೆ ಗಣೇಶ ರಾಜ, ಬೆಂಗಳೂರು



## ಉಪಯುಕ್ತ ವಿಷಯ ಸಂಗ್ರಹ

‘ನೋ ಫ್ಲೈಟ್ಸ್ ಲ್ಯಾಂಡ್’ ಲೇಖನ ಉಪಯುಕ್ತವಾಗಿದೆ. ವಿಮಾನಗಳು ಏಕೆ ಕೆಲವು ಪ್ರದೇಶಗಳ ಮೇಲೆ ಹಾರುವುದಿಲ್ಲ ಎಂದು ತಕ್ಕ ವಿವರಣೆಯನ್ನೂ ನೀಡಿರುವುದು ಉಚಿತವಾಗಿದೆ. ಇಂಥ ಕುತೂಹಲಭರಿತ ಹಾಗೂ ಮಾಹಿತಿಪೂರ್ಣ ಲೇಖನಗಳು ಇನ್ನಷ್ಟು ಪ್ರಕಟಗೊಳ್ಳಲಿ.

—ದಯಾನಂದ, ಹಾಸನ

## ನವಿರಾದ ಕಥೆ

ಈ ಕಾಲಕ್ಕೆ ಅಪರೂಪವೆನಿಸಿತು ಮಹಾರಾಜರ ಸಂಸ್ಥಾನದ ಕುದುರೆ ಕಥೆ. ನವಿರಾದ ವಾಕ್ಯಗಳಿಂದ ಓದಿಸಿಕೊಂಡು ಹೋಯಿತು. ಅಶ್ವಮೇಧ ಕುದುರೆ ಕ್ರೀಡಾಕೇಂದ್ರಕ್ಕೆ ಹೊಂದಿಕೊಳ್ಳಲಾಗದೇ ಓಡಿಹೋಗಿದ್ದು ಕುತೂಹಲ ಕೆರಳಿಸಿತು. ಸಿರಿವಂತೆ ಅದನ್ನು ಪಳಗಿಸಿ ಓಡಿಸಿಕೊಂಡು ಬಂದು, ಸೂರ್ಯಕಾಂತರನ್ನು ಪಡೆದ ವಿವರಣೆ ಚೆನ್ನಾಗಿತ್ತು.

—ಸುಜಾತಾ ಆರ್, ತುಮಕೂರು

## ಶೌರ್ಯ

‘ವೀರ್ಯ’ವಂತರ ಮಾತಿರಲಿ; ಚೀನಾ ಹಿಂದಿಕ್ಕಿದ ಜ(ನ)ನ ಸಂಖ್ಯೆ ಸಾಲದೆ? ಈಗ ಬೇಕಾಗಿರುವುದು ಭ್ರಷ್ಟಾಚಾರದ ವಿರುದ್ಧ ಸೆಣಸುವ ಶೌರ್ಯವಂತರ ಪಡೆ!

—ಸಿಪಿಕೆ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in